**ಕರ್ನಾಟಕ ಸರ್ಕಾರ**

**ಲೋಕೋಪಯೋಗಿ ಇಲಾಖೆ**

ಸಂಖ್ಯೆ:ಸಕಾಇಂ:ನಂ1:ಲೋಇ:ಉವಿ:ಬೆಂದ:2025-26/೩೩೨

ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ನಂ 1 ಲೋ.ಇ ದಕ್ಷಿಣ ಉಪವಿಭಾಗ,
ಕೆ.ಆರ್.ವೃತ್ತ, ಬೆಂಗಳೂರು.
ದಿನಾಂಕ: 24/06/2025

ರವರಿಗೆ,

Secretary,
Deeksha Stem School,
Sy. No. 10/3E, Kommaghatta,
Kengeri Hobli,
Bengaluru – 560060.

ಮಾನ್ಯರೇ,

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೊಮ್ಮಘಟ್ಟ ಗ್ರಾಮದಲ್ಲಿರುವ **ದೀಕ್ಷಾ ಸ್ಟೆಮ್ ಶಾಲಾ** ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ: ಲೋಇ 59 ಬಿಇಡಿ 2019, ದಿನಾಂಕ: 07-05-2022
2. ಸರ್ಕಾರದ ಸುತ್ತೋಲೆ ಸಂಖ್ಯೆ: ಲೋಇ 59 ಬಿಇಡಿ 2019, ದಿನಾಂಕ: 25-09-2024
3. ಕಾರ್ಯದರ್ಶಿಗಳು, ದೀಕ್ಷಾ ಸ್ಟೆಮ್ ಶಾಲೆ, ಕೆಂಗೇರಿ ಹೋಬಳಿ, ಬೆಂಗಳೂರು ರವರ ಮನವಿ ಪತ್ರ ದಿನಾಂಕ: 21-06-2025

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೊಮ್ಮಘಟ್ಟ ಗ್ರಾಮದಲ್ಲಿರುವ ದೀಕ್ಷಾ ಸ್ಟೆಮ್ ಶಾಲಾ ಕಟ್ಟಡಕ್ಕೆ ಶೈಕ್ಷಣಿಕ ಉದ್ದೇಶಕ್ಕಾಗಿ ನಿರಾಕ್ಷೇಪಣಾ ಪತ್ರವನ್ನು ನವೀಕರಿಸಿ ಕೊಡಲು ಉಲ್ಲೇಖಿತ (3) ರಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಸದರಿ ಕಟ್ಟಡದ ನಕ್ಷೆಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸೂಲಿಕೆರೆ ಗ್ರಾಮ ಪಂಚಾಯಿತಿ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ರವರು ಅನುಮೋದನೆ ನೀಡಿರುತ್ತಾರೆ. ಸದರಿ ಕಟ್ಟಡವು ನೆಲಮಹಡಿ ಹಾಗೂ ಎರಡು ಮೇಲ್ಮಹಡಿಯನ್ನು ಒಳಗೊಂಡಿರುತ್ತದೆ. ಸದರಿ ಕಟ್ಟಡವನ್ನು 2018ನೇ ಸಾಲಿನಲ್ಲಿ ನಿರ್ಮಿಸಲಾಗಿರುತ್ತದೆ.

ಮುಂದುವರೆದು, ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ, ಕಟ್ಟಡದ ಸದೃಢತೆಯ ಬಗ್ಗೆ ದಿನಾಂಕ:27-07-2023 ರಂದು Department of Civil Engineering, University of Visvesvaraya College of Engineering, Jnanabharathi Campus, Bengaluru ರವರ ಮುಖಾಂತರ ಪರೀಕ್ಷೆಗಳನ್ನು ಕೈಗೊಂಡು ವರದಿಯ ಪ್ರತಿಯನ್ನು ಸಲ್ಲಿಸಿರುತ್ತೀರಿ. ಸದರಿ ಪರೀಕ್ಷಾ ವರದಿಯಂತೆ ಕಟ್ಟಡವು ಸದೃಢತೆಯಿಂದ ಇರುವುದು ಕಂಡು ಬಂದಿರುತ್ತದೆ ಹಾಗೂ ಸದರಿ ಪರೀಕ್ಷಾ ವರದಿಯೂ 27-07-2026 ರವರೆಗೆ ಊರ್ಜಿತವಿರುತ್ತದೆ.

ಉಲ್ಲೇಖಿತ (1) ರ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ವಿತರಿಸಲು ರೂ.5,000/- (ರೂ.ಐದು ಸಾವಿರ ರೂಪಾಯಿಗಳು ಮಾತ್ರ) ಗಳ ಮೊತ್ತವನ್ನು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೊಮ್ಮಘಟ್ಟ ಗ್ರಾಮದಲ್ಲಿರುವ ದೀಕ್ಷಾ ಸ್ಟೆಮ್ ಶಾಲೆ ರವರು Punjab National Bank, Miller's Road, Vasanthnagar, Bangalore Branch, ಡಿ.ಡಿ ಸಂಖ್ಯೆ:158323, ದಿನಾಂಕ:24-06-2025 ರಲ್ಲಿ ಈ ಕಛೇರಿಗೆ ಪಾವತಿಸಿರುತ್ತಾರೆ. ಸದರಿ ಕಟ್ಟಡದಲ್ಲಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೊಮ್ಮಘಟ್ಟ ಗ್ರಾಮದಲ್ಲಿರುವ ದೀಕ್ಷಾ ಸ್ಟೆಮ್ ಶಾಲೆ ರವರು ಒದಗಿಸಿರುವ ಮಾಹಿತಿಯಂತೆ ಕೊಠಡಿಗಳ ಸಂಖ್ಯೆ ಈ ಕೆಳಗಿನಂತಿರುತ್ತದೆ.

| ಕ್ರ ಸಂ. | ಅನುಮೋದಿತ ನಕ್ಷೆ | ಕೊಠಡಿಗಳ ಸಂಖ್ಯೆ |
|---|---|---|
| 1. | ನೆಲಮಹಡಿ ಮತ್ತು ಎರಡು ಮೇಲ್ಮಹಡಿ | 17 ಶಾಲಾ ಕೊಠಡಿಗಳು |

ಮುಂದುವರೆದು, ಉಲ್ಲೇಖಿತ (2) ರ ಸರ್ಕಾರದ ಸುತ್ತೋಲೆಯ ಕ್ರಮ ಸಂಖ್ಯೆ ಅ) - ಕಂಡಿಕೆ (i) ರಲ್ಲಿ *"ಕಟ್ಟಡದ ಜೀವಿತಾವಧಿಯು 15 ವರ್ಷಗಳಿಗಿಂತ ಕಡಿಮೆ ಇದ್ದಂತಹ ಸಂದರ್ಭದಲ್ಲಿ ಸುತ್ತೋಲೆ ದಿನಾಂಕ: 07-05-2022 ರಲ್ಲಿ ತಿಳಿಸಿದಂತಹ ಕ್ರಮಗಳನ್ನು ಅನುಸರಿಸಿ ಸೂಕ್ತವೆಂದು ಕಂಡುಬಂದ ನಂತರ Structural Stability ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡುವಾಗ ಪ್ರಮಾಣ ಪತ್ರದ ಚಾಲ್ತಿ ಅವಧಿಯನ್ನು ಕಟ್ಟಡದ ಸಾಮರ್ಥ್ಯಕ್ಕೆ ಅನುಸಾರವಾಗಿ ಸೂಕ್ತವಾಗಿ ನಿರ್ಧರಿಸಿ ಗರಿಷ್ಠ 10 ವರ್ಷಗಳಿಗೆ ನಿಗದಿಪಡಿಸಲು"* ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿರುತ್ತದೆ.

ಅದರಂತೆ, ಸದರಿ ಕಟ್ಟಡದ ಭೌತಿಕ ಸ್ಥಿತಿಯನ್ನು ದಿನಾಂಕ: 23-06-2025 ರಂದು ಖುದ್ದಾಗಿ ಭೇಟಿ ನೀಡಿ ಶಾಲಾ ಕಟ್ಟಡವನ್ನು ಪರಿಶೀಲಿಸಲಾಗಿ, **Department of Civil Engineering, University of Visvesvaraya College of Engineering, Jnanabharathi Campus, Bengaluru** ರವರ ವರದಿಯಂತೆ ಕಟ್ಟಡವು ಸದೃಢವಾಗಿರುತ್ತದೆ. ಸದರಿ ಕಟ್ಟಡಕ್ಕೆ ಕಾಲಕಾಲಕ್ಕೆ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳುವುದು ಅತ್ಯಾವಶ್ಯಕವಾಗಿರುತ್ತದೆ ಹಾಗೂ ಕೆಳಕಂಡ ಅಂಶಗಳನ್ನು ದುರಸ್ಥಿ ಪಡಿಸುವ ಷರತ್ತಿಗೊಳಪಟ್ಟು ಮುಂದಿನ **ಒಂದು (1) ಶೈಕ್ಷಣಿಕ ವರ್ಷಕ್ಕೆ**, ಶೈಕ್ಷಣಿಕ ಉದ್ದೇಶಕ್ಕಾಗಿ ಉಪಯೋಗಿಸಲು ಶಾಲಾ ಕಟ್ಟಡಕ್ಕೆ ನಿರಾಕ್ಷೇಪಣಾ ಪತ್ರವನ್ನು ಈ ಹಿಂದೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ: ಕಾನಿಇಂ/ಬೆಂ.ವಿ/ಎಇ-2/2022-23/1792, ದಿನಾಂಕ: 07-09-2023 ರಲ್ಲಿ ನೀಡಲಾಗಿದ್ದ ನಿರಾಕ್ಷೇಪಣಾ ಪತ್ರದ ಷರತ್ತಿಗಳಿಗೆ ಒಳಪಟ್ಟು ಕಟ್ಟಡ ಸದೃಢತೆಯ ನಿರಾಕ್ಷೇಪಣೆಯನ್ನು ನವೀಕರಿಸಲಾಗಿದೆ.

1. ಕಟ್ಟಡದಲ್ಲಿ ಉಂಟಾಗಿರುವ ಗೋಡೆಗಳಲ್ಲಿನ Cracks ಗಳನ್ನು, Grouting ಮುಖಾಂತರ ದುರಸ್ಥಿ ಪಡಿಸುವುದು.
2. ಬಾಲ್ಕನಿಗಳಲ್ಲಿರುವ ಪ್ಯಾರಾಪೆಟ್ ತಡೆಗೋಡೆಗಳಲ್ಲಿ ಬಿರುಕು ಕಂಡಿದ್ದು, ಸದರಿಯನ್ನು ತುರ್ತಾಗಿ ದುರಸ್ಥಿಗೊಳಿಸುವುದು.
3. ನೆಲಮಹಡಿಯಲ್ಲಿರುವ ಕೊಠಡಿಗಳಲ್ಲಿನ ಮೆಟ್ಟಿಲುಗಳು ಅತೀ ಎತ್ತರದಿಂದ ಕೂಡಿದ್ದು, ಎತ್ತರವನ್ನು ಕಡಿಮೆ ಮಾಡಲು ಹೆಚ್ಚುವರಿಯಾಗಿ ಒಂದು ಮೆಟ್ಟಿಲುಗಳನ್ನು ಅಳವಡಿಸುವುದು.
4. ಪೋರ್ಟಿಕೋನಲ್ಲಿರುವ ಮೆಟ್ಟಿಲುಗಳು, ರ್‍ಯಾಂಪ್ ಮತ್ತು Staircase Room ಗಳಲ್ಲಿ ಶಾಲಾ ಮಕ್ಕಳು ಬೀಳದಂತೆ ಶಾಶ್ವತವಾಗಿ ಎಂ.ಎಸ್ ಅಥವಾ ಎಸ್.ಎಸ್. ರೈಲಿಂಗ್‌ಗಳ ವ್ಯವಸ್ಥೆ ಕಲ್ಪಿಸುವುದು.
5. ಸದರಿ ಕಟ್ಟಡದಲ್ಲಿರುವ ಶೌಚಾಲದ ಹಲವು ಭಾಗಗಳಲ್ಲಿ ಬಿರುಕು ಕಂಡಿದ್ದು, ಸದರಿಯನ್ನು ತುರ್ತಾಗಿ ದುರಸ್ಥಿ ಪಡಿಸುವುದು.
6. ಸದರಿ ಕಟ್ಟಡದಲ್ಲಿರುವ ಹಲವು ಕಿಟಕಿಗಳಿಗೆ ಚಜ್ಜಾ ಇಲ್ಲದಿರುವುದರಿಂದ ಮಳೆಯ ನೀರು ನೇರವಾಗಿ ತರಗತಿಯ ಕೊಠಡಿಯೊಳಗೆ ಪ್ರವೇಶಿಸುವ ಸಾಧ್ಯತೆಗಳಿರುತ್ತದೆ. ಆದಕಾರಣ, ತಾಂತ್ರಿಕವಾಗಿ ನೂತನ ಚಜ್ಜಾವನ್ನು ನಿರ್ಮಾಣ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದು.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ನಂ 1 ಲೋ.ಇ. ದಕ್ಷಿಣ ಉಪವಿಭಾಗ
ಬೆಂಗಳೂರು

Assistant Executive Engineer
No 1, PWD South Sub-Division
Bangalore